<u>**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ**</u>

<u>**CC 166/2018**</u>

**ದಿನಾಂಕ 27-03-2024ರಂದು ಮಧ್ಯಾಹ್ನ 01:05 ಗಂಟೆ ಸಮಯದಲ್ಲಿ ಮಾನ್ಯ ಉಚ್ಛ ನ್ಯಾಯಾಲಯ ಕರ್ನಾಟಕದ ವಿಡಿಯೋ ಕಾನ್ಫರೆನ್ಸ್ ನಿಯಮದಂತೆ ವಿಜಯಪುರ ಜಿಲ್ಲಾ ಅಧೀಕ್ಷಕರ ಕಚೇರಿಯಲ್ಲಿ ವಿಡಿಯೋ ಕಾನ್ಫರೆನ್ಸ್ ನಿಯಮದಂತೆ ಕೋ-ಆರ್ಡಿನೇಟರ್ ಆಗಿ ಶ್ರೀ ಸಂತೋಷ ರಜಪೂತ, AHC-09 ನ್ಯಾಯಾಲಯದ ಕೋರ್ಟ್ ಹಾಲನಲ್ಲಿ ಕೋ-ಆರ್ಡಿನೇಟರ್ ಆಗಿ ಶ್ರೀ ಮಹಾಲಿಂಗಪ್ಪ , ಪ್ರ.ದ.ಸ.ರವರನ್ನು ನೇಮಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಸಾಕ್ಷಿ ಸಾಕ್ಷ್ಯವನ್ನು ಈ ಕೆಳಕಂಡಂತೆ ತೆಗೆದುಕೊಳ್ಳಲಾಯಿತು.**

**ಸಾಕ್ಷಿಗೆ ದಿನಾಂಕ 27-03-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಪರಶುರಾಮ | CW-11 |
| ತಂದೆ ಹೆಸರು | ಃ | ನಿಂಗಪ್ಪ ಮನಗೂಳಿ. | PW-8 |
| ವಯಸ್ಸು | ಃ | 39 ವರ್ಷ | |
| ಉದ್ಯೋಗ | ಃ | ಡಿ.ಎಸ್.ಪಿ. ವಿಜಯಪುರ ಜಿಲ್ಲಾ ಅಧೀಕ್ಷಕರ ಕಚೇರಿ | |
| ವಾಸಸ್ಥಳ | ಃ | ವಿಜಯಪುರ | |

<u>**ಸಾಕ್ಷಿಯ ವಿಚಾರಣೆ Video Conference ಮುಖಾಂತರ**</u>

<u>**ಮುಖ್ಯ ವಿಚಾರಣೆ ಸಹಾಯಕ ಸರಕಾರಿ ಅಭಿಯೋಜಕರಿಂದ (Time : 01-05)**</u>

ದಿನಾಂಕ 06-03-2014 ರಿಂದ 09-03-2015ವರೆಗೆ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 06-01-2015ರಂದು ಪ್ರಕರಣದ ಕಡತವನ್ನು ಚಾಸಾ-10ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಜಿಲ್ಲಾಧಿಕಾರಿ ಕಲ್ಬುರ್ಗಿರವರಿಂದ ಜಪ್ತಿಪಡಿಸಿಕೊಳ್ಳಲಾದ ಪಡಿತರ ಅಕ್ಕಿ ಮತ್ತು ಲಾರಿಯನ್ನು ನಮ್ಮ ವಶದಲ್ಲಿ ಇಟ್ಟುಕೊಳ್ಳಲು ಪರವಾನಿಗೆ ಪಡೆದ ಆದೇಶದ ಪ್ರತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನನಗೆ ವರ್ಗಾವಣೆಯಾದ ಕಾರಣ ಪ್ರಕರಣದ ಕಡತವನ್ನು ಚಾಸಾ-12 ಆನಂದರಾರವರಿಗೆ ಒಪ್ಪಿಸಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಜಿಲ್ಲಾಧಿಕಾರಿಯವರ ಪರವಾನಿಗೆ ಆಗಿದ್ದು, ಅದನ್ನು ನಿಶಾನೆ ಪಿ-4 ಎಂದು , ಸಾಕ್ಷಿ ಸಹಿಯನ್ನು ನಿಶಾನೆ ಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ನಿಪಿ-2 ರಿಂದ 5ರಲ್ಲಿರುವ ಲಾರಿಂ

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎಂ. ವಕೀಲರಿಂದಃ**

ನಾನು ಚಾಸಾ-10 ರವರಿಂದ ಯಾವುದೇ ಕಡತ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಜಿಲ್ಲಾಧಿಕಾರಿಗಳ ಪರವಾನಿಗೆ ಪ್ರತಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರಕರಣದಲ್ಲಿ ಯಾವುದೇ ತನಿಖೆ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ವರ್ಗಾವಣೆಯಾದ ಕಾರಣ ನಾನು ಪ್ರಕರಣದ ಕಡತವನ್ನು ಆನಂದರಾವರವರಿಗೆ ನೀಡಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿ ಮತ್ತು ಅಕ್ಕಿ ನಮ್ಮ ವಶದಲ್ಲಿಟ್ಟುಕೊಳ್ಳಲು ಜಿಲ್ಲಾಧಿಕಾರಿಯವರಿಂದ ಪರವಾನಿಗೆ ಪಡೆದಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು

ಜೇವರ್ಗಿ

Remote point Co-Ordinator

Signature:

(Mahalingappa)

FDA

Remote point Co- Ordinator

Signature:

(Santosh Rajaput)

**AHC-09**